**ಕರ್ನಾಟಕ ಸರ್ಕಾರ**

ನಂ. ಆಇ 25 ಟಿಎಆರ್ 08

ಕರ್ನಾಟಕ ಸರ್ಕಾರದ ಸಚಿವಾಲಯ
ಕೊಠಡಿ ಸಂಖ್ಯೆ 257, ವಿಧಾನಸೌಧ,
ಬೆಂಗಳೂರು, ದಿನಾಂಕ: 05-09-2008.

**ಸುತ್ತೋಲೆ**

ವಿಷಯ : ದಿನಾಂಕ: 01-04-2008ರಿಂದ ಮೂಲದಲ್ಲೇ ಆದಾಯ ತೆರಿಗೆಯನ್ನು ಕಡಿತಗೊಳಿಸಿದ (ಟಿಡಿಎಸ್) ಬಗ್ಗೆ ಪ್ರಮಾಣಪತ್ರಗಳ ಅಭೌತೀಕರಣ (ಡಿಮೆಟಿರಿಯಲೈಸೇಷನ್) ವಿಧಾನದ ಯೋಜನೆಯನ್ನು ಜಾರಿಗೆ ತರುವ ಬಗ್ಗೆ-ಸೂಚನೆಗಳು.

----

1. ಸಂಖ್ಯೆ: ಆಇ 41 ಟಿಎಆರ್ 05 ದಿನಾಂಕ: 17-11-2007 ರ ಸುತ್ತೋಲೆಯಲ್ಲಿ ದಿನಾಂಕ: 1-4-2008ರಿಂದ ಜಾರಿಗೆ ಬರುವಂತೆ ಮೂಲದಲ್ಲೇ ಆದಾಯ ತೆರಿಗೆಯನ್ನು ಕಡಿತಗೊಳಿಸಿದ (ಟಿಡಿಎಸ್) ಪ್ರಮಾಣಪತ್ರಗಳ ಅಭೌತೀಕರಣ ವಿಧಾನದ ಯೋಜನೆಯನ್ನು ಜಾರಿಗೊಳಿಸುವುದಕ್ಕಾಗಿ ಆದಾಯ ತೆರಿಗೆ ಅಧಿನಿಯಮಕ್ಕೆ ಅಗತ್ಯವಾದ ಬದಲಾವಣೆಯನ್ನು 2004ರ ಹಣಕಾಸು ಅಧಿನಿಯಮದಲ್ಲಿ ಮಾಡಿರುವ ಬಗ್ಗೆ ತಿಳಿಸಿ ಹೊಸ ಕಾರ್ಯವಿಧಾನವನ್ನು ವಿಸ್ತಾರವಾಗಿ ವಿವರಿಸಲಾಗಿದೆ.

ಅ) ಈ ಸುತ್ತೋಲೆಯ ಕಂಡಿಕೆ 2ರ ಪ್ರಕಾರ ಆದಾಯ ತೆರಿಗೆ ಅಧಿನಿಯಮದ 203 ಎ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ, ಮೂಲದಲ್ಲೇ ಆದಾಯ ತೆರಿಗೆಯನ್ನು ಕಡಿತ ಮಾಡಿಕೊಳ್ಳುವುದಕ್ಕೆ ಜವಾಬ್ದಾರರಾದ ಎಲ್ಲಾ ವ್ಯಕ್ತಿಗಳು ತೆರಿಗೆ ಕಡಿತ ಖಾತೆ ಸಂಖ್ಯೆಯನ್ನು (ಟ್ಯಾನ್ ನಂ.) ಪಡೆದುಕೊಂಡು ಅದನ್ನು ಚಲನ್‌ಗಳಲ್ಲಿ, ಟಿಡಿಎಸ್ ಪ್ರಮಾಣಪತ್ರಗಳಲ್ಲಿ, ವಿವರಪಟ್ಟಿ ಮುಂತಾದವುಗಳಲ್ಲಿ ಉಲ್ಲೇಖಿಸುವುದು ಕಡ್ಡಾಯವಾಗಿದೆ. ತೆರಿಗೆ ಕಡಿತ ಖಾತೆ ಸಂಖ್ಯೆಯು (ಟ್ಯಾನ್) 10 ಅಂಕೆಗಳುಳ್ಳ ಆಲ್ಫಾ-ನ್ಯುಮೇರಿಕ್ ಸಂಖ್ಯೆಯಾಗಿದ್ದು, ಇದನ್ನು ಆದಾಯ ತೆರಿಗೆ ಇಲಾಖೆಯ ತೆರಿಗೆ ನಿರ್ಧರಣಾಧಿಕಾರಿಯು ನೀಡುತ್ತಾರೆ. 49 ಬಿ ನಮೂನೆಯಲ್ಲಿರುವ ಅರ್ಜಿಯನ್ನು ವಿದ್ಯುನ್ಮಾನ-ಟಿಡಿಎಸ್ ವಿವರಪಟ್ಟಿಗಳನ್ನು ಸ್ವೀಕರಿಸುವುದಕ್ಕಾಗಿಯೇ ಇರುವಂಥ ಯಾವುದೇ ಟಿನ್ ಸಹಾಯ ಕೇಂದ್ರದಲ್ಲಿ ಸಲ್ಲಿಸಬಹುದು. ಎನ್‌ಎಸ್‌ಡಿಎಲ್ ಸ್ವೀಕೃತಿ ಪತ್ರದ ಎದುರು ನಮೂನೆ 49 ಬಿ ನಮೂನೆಯಲ್ಲಿ ತಿಳಿಸಿರುವ ವಿಳಾಸಕ್ಕೆ ಹೊಸ ಟ್ಯಾನ್(TAN)ನ ಬಗ್ಗೆ ತಿಳಿಸುವಂತೆ ನೋಡಿಕೊಳ್ಳುತ್ತದೆ. ಯಾರೇ ವ್ಯಕ್ತಿಯು 203 ಎ ಪ್ರಕರಣದ ಉಪಬಂಧಗಳನ್ನು ಪಾಲಿಸಲು ವಿಫಲನಾದರೆ, ಆತನು 272 ಬಿಬಿ ಪ್ರಕರಣದ ಮೇರೆಗೆ ದಂಡ ರೂಪದಲ್ಲಿ 10,000/- ರೂಪಾಯಿಗಳ ಮೊಬಲಗನ್ನು ಸಂದಾಯ ಮಾಡಲು ಹೊಣೆಯಾಗುತ್ತಾನೆ.

.........2

(ಆ) ಆದಾಯ ತೆರಿಗೆ ಅಧಿನಿಯಮದ ವಿವಿಧ ಪ್ರಕರಣಗಳ ಮೇರೆಗೆ ಮೂಲದಲ್ಲೇ ಆದಾಯ ತೆರಿಗೆಯನ್ನು, ಕಡಿತ ಮಾಡಿಕೊಳ್ಳುವುದಕ್ಕೆ ಜವಾಬ್ದಾರನಾಗಿರುವ ತೆರಿಗೆ ಕಡಿತ ಮಾಡುವ ಅಧಿಕಾರಿಯು (ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿ) ಈ ಮುಂದಿನ ವೇಳಾಪಟ್ಟಿ ಪ್ರಕಾರ ಟಿನ್‌ಗೆ(TIN) ವಿದ್ಯುನ್ಮಾನ ವಿಧಾನದಲ್ಲಿ (ಇಲೆಕ್ಟ್ರಾನಿಕವಾಗಿ) ನಮೂನೆ 24 ಕ್ಯು ಮತ್ತು 26 ಕ್ಯು ನಲ್ಲಿ ತೆರಿಗೆ ಕಡಿತಕ್ಕೊಳಗಾದವರ ಪ್ರಕಾರವಾಗಿ ತ್ರೈಮಾಸಿಕ ವಿವರಪಟ್ಟಿಗಳನ್ನು ಸಲ್ಲಿಸಬೇಕಾಗುತ್ತದೆ :

| ತ್ರೈಮಾಸಿಕದ ಮುಕ್ತಾಯದಲ್ಲಿ | ನಿಗದಿತ ದಿನಾಂಕ |
|---|---|
| 30 ನೇ ಜೂನ್ | 15 ನೇ ಜುಲೈ |
| 30 ನೇ ಸೆಪ್ಟೆಂಬರ್ | 15 ನೇ ಅಕ್ಟೋಬರ್ |
| 31 ನೇ ಡಿಸೆಂಬರ್ | 15 ನೇ ಜನವರಿ |
| 31 ನೇ ಮಾರ್ಚ್ | 15 ನೇ ಜೂನ್ |

2. ಆದಾಯ ತೆರಿಗೆ ಹೆಚ್ಚುವರಿ ಆಯುಕ್ತರು(ಟಿಡಿಎಸ್), ರೇಂಜ್-16, ಬೆಂಗಳೂರು ಇವರು ದಿನಾಂಕ: 7-8-2008ರಲ್ಲಿ ಸರ್ಕಾರಕ್ಕೆ ಪತ್ರ ಬರೆದು ಕರ್ನಾಟಕದಲ್ಲಿ ಸುಮಾರು 22000 ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳ ಪೈಕಿ ಕೇವಲ 11000 ಅಧಿಕಾರಿಗಳು ಮಾತ್ರ ತೆರಿಗೆ ಕಡಿತ ಖಾತೆ ಸಂಖ್ಯೆಯನ್ನು (TAN No.) ಪಡೆದಿರುತ್ತಾರೆಂದು ತಿಳಿಸಿ ತೆರಿಗೆ ಕಡಿತ ಖಾತೆ ಸಂಖ್ಯೆಯನ್ನು ಪಡೆಯುವ ಬಗ್ಗೆ ತೆರಿಗೆ ಕಡಿತ ಮಾಡಿ ಪಾವತಿಸುವ ಬಗ್ಗೆ ಹಾಗೂ ಟಿಡಿಎಸ್ ವಿವರ ಪಟ್ಟಿಗಳನ್ನು ಸಲ್ಲಿಸುವ ಬಗೆ ಇರುವ ಕಾನೂನು ಅನಿವಾರ್ಯತೆ ಬಗ್ಗೆ ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳಿಗೆ(DDOs) ತಿಳುವಳಿಕೆ ನೀಡಲು ಸರ್ಕಾರವನ್ನು ಕೋರಿರುತ್ತಾರೆ.

3. ಮೇಲೆ ವಿವರಿಸಿರುವ ಕಾರಣಗಳಿಗಾಗಿ ರಾಜ್ಯ ಸರ್ಕಾರದ ಎಲ್ಲಾ ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ತೆರಿಗೆ ಕಡಿತ ಖಾತೆ ಸಂಖ್ಯೆಯನ್ನು ಪಡೆಯುವ ಬಗ್ಗೆ ಹಾಗೂ ನಿಗದಿಪಡಿಸಿರುವ ಸಮಯದೊಳಗೆ ಟಿ.ಡಿ.ಎಸ್. ವಿವರ ಪಟ್ಟಿಗಳನ್ನು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸುವ ಬಗ್ಗೆ ಮೇಲಿನ ಕಂಡಿಕೆಗಳಲ್ಲಿ ತಿಳಿಸಿರುವ ವಿವರಗಳ ಬಗ್ಗೆ ಗಮನ ಹರಿಸಲು ಸೂಚಿಸಲಾಗಿದೆ. ಯಾವ ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ಇದುವರೆಗೆ ತೆರಿಗೆ ಕಡಿತ ಖಾತೆ ಸಂಖ್ಯೆಯನ್ನು (TAN No.) ಆದಾಯ ತೆರಿಗೆ ಇಲಾಖೆಯಿಂದ ಪಡೆದಿಲ್ಲವೋ ಅಂಥಹ ಅಧಿಕಾರಿಗಳು 2008ರ ಅಕ್ಟೋಬರ್ 31 ರ ಅಂತ್ಯದೊಳಗೆ ಈ ಸಂಖ್ಯೆಯನ್ನು ತಮಗೆ ಸಮೀಪದ ಟಿನ್ ಕೇಂದ್ರದಿಂದ ಪಡೆಯಲು ಕೋರಲಾಗಿದೆ. ಈ

..........3

ಉದ್ದೇಶಕ್ಕಾಗಿ ತೆರಿಗೆ ಕಡಿತ ಖಾತೆ ಸಂಖ್ಯೆಯನ್ನು (TAN No.) ಪಡೆಯಲು ನಿಗದಿ ಪಡಿಸಿರುವ ನಮೂನೆ ಹಾಗೂ ಕರ್ನಾಟಕದಲ್ಲಿನ ಟಿನ್ ಸೌಲಭ್ಯ ಕೇಂದ್ರಗಳ ಪಟ್ಟಿಯನ್ನು ಹೆಚ್ಆರ್ಎಂಎಸ್ ಮುಖಾಂತರ ಎಲ್ಲಾ ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳಿಗೆ ತಲುಪಿಸಲು ಸರ್ಕಾರದ ಕಾರ್ಯದರ್ಶಿ, ಇ-ಆಡಳಿತ ಇವರನ್ನು ಕೋರಲಾಗಿದೆ.

**ಈ ಅವಧಿಯೊಳಗೆ ತೆರಿಗೆ ಕಡಿತ ಖಾತೆ ಸಂಖ್ಯೆಯನ್ನು ಪಡೆಯದೇ ಇದ್ದಲ್ಲಿ ಅಂಥಹ ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ಸಲ್ಲಿಸುವ ಅಕ್ಟೋಬರ್ 2008ರ ವೇತನ ಬಿಲ್ಲುಗಳನ್ನು ಮಾನ್ಯ ಮಾಡದಿರುವಂತೆ ಖಜಾನೆಗಳಿಗೆ ನಿರ್ದೇಶನ ನೀಡಲಾಗುವುದು. ಆದ್ದರಿಂದ ಎಲ್ಲಾ ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ಕೂಡಲೇ ತೆರಿಗೆ ಕಡಿತ ಖಾತೆ ಸಂಖ್ಯೆಯನ್ನು ಪಡೆದುಕೊಳ್ಳಲು ಕೋರಲಾಗಿದೆ.**

(ಅಜಯ್ ಸೇಠ್)
ಸರ್ಕಾರದ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲಗಳು)
ಆರ್ಥಿಕ ಇಲಾಖೆ

ಇವರಿಗೆ

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
2. ಸರ್ಕಾರದ ಕಾರ್ಯದರ್ಶಿ, ಇ-ಆಡಳಿತ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
3. ಎಲ್ಲಾ ಇಲಾಖೆಗಳ ಮುಖ್ಯಸ್ಥರುಗಳು(ತಮ್ಮ ಅಧೀನದಲ್ಲಿ ಬರುವ ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳಿಗೆ ಈ ಬಗ್ಗೆ ಸೂಕ್ತ ನಿರ್ದೇಶನ ನೀಡಲು ಕೋರಲಾಗಿದೆ).
4. ಎಲ್ಲಾ ಜಿಲ್ಲಾಧಿಕಾರಿಗಳು
5. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
6. ಪ್ರಧಾನ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಿಧಾನ ಮಂಡಲ ವಿಧಾನ ಸೌಧ, ಬೆಂಗಳೂರು-560 001.
7. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಡಾ|| ಬಿ. ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001, ಇವರಿಗೆ ಪತ್ರದೊಂದಿಗೆ.
8. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ , ಬಹುಮಾಹಡಿಗಳ ಕಟ್ಟಡ, 1 ನೇ ಹಂತ, ಡಾ|| ಬಿ. ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001.
9. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಪಾರ್ಕ್ ಹೌಸ್, ರಸ್ತೆ, ಬೆಂಗಳೂರು-560 001.
10. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು
11. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು
12. ಉಪ ನಿರ್ದೇಶಕರು, ಖಜಾನೆ ಸಂಪರ್ಕ ವ್ಯವಸ್ಥಾಪಕ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
13. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ ಇವರಿಗೆ ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಲು
14. ಎಸ್.ಜಿ.ಎಫ್./ಬಿಡಿ ಪ್ರತಿಗಳು